<u>ಸಿಸಿ ಸಂಖ್ಯೆಃ **-85/2022**</u> ಡಿ.<u>ಡಬ್ಲ್ಯೂ:**-2**</u>

ದಿನಾಂಕಃ **09-01-2026** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಮುಖ್ಯ ವಿಚಾರಣೆ :- ನ್ಯಾಯಾಲಯದ ಪರವಾಗಿ:-</u>

ತದನಂತರ ಅದೇ ದಿನ ಫಿರ್ಯಾಧಿಗೆ ನಾನು ರೂ.4,000/- ಹಣವನ್ನು ನಗದು ರೂಪದಲ್ಲಿ ಕೊಟ್ಟಿರುತ್ತೇನೆ. ನಂತರ ನಾನು ಫಿರ್ಯಾಧಿಗೆ ಕೊಡಬೇಕಾಗಿದ್ದ ಸಂಪೂರ್ಣ ಹಣ ಮರುಪಾವತಿ ಆಗಿದ್ದರಿಂದ ನಾನು ಕೊಟ್ಟಿರುವ ಚಕ್ಕನ್ನು ವಾಪಾಸ್ಸು ಕೊಡುವಂತೆ ಕೇಳಿದ್ದೆನು ಆ ಸಮಯದಲ್ಲಿ ಫಿರ್ಯಾಧಿಯು ಚಕ್ಕನ್ನು ಮರುದಿನ ತಂದುಕೊಡುವುದಾಗಿ ತಿಳಿಸಿದರು. ತದನಂತರ ಫಿರ್ಯಾಧಿಯು ನಾನು ಕೊಟ್ಟಿರುವ ಚಕ್ಕನ್ನು ವಾಪಾಸ್ಸು ಕೊಟ್ಟಿರುವುದಿಲ್ಲ ಮತ್ತು ನಾನು ಫಿರ್ಯಾಧಿಗೆ ಕೊಡಬೇಕಾಗಿರುವಂತ ಸಂಪೂರ್ಣ ಹಣವನ್ನು ಈಗಾಗಲೇ ಮರುಪಾವತಿ ಮಾಡಿದ್ದರಿಂದ ನಿಪಿ-1 ಮತ್ತು 7 ಚಕ್ಕಿನ ಹಣವನ್ನು ಪಾವತಿ ಮಾಡಲು ಭಾದ್ಯಸ್ಥನಾಗಿರುವುದಿಲ್ಲ ಆದ ಕಾರಣ ನನ್ನನ್ನು ಈ ಪ್ರಕರಣದಿಂದ ಮುಕ್ತನಾಗಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಸಾಕ್ಷಿಯನ್ನು ಮಾನ್ಯ ಆರೋಪಿಯ ಪರ ವಕೀಲರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ನೀಡಿ ಅನುಮತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿಯ ಪರ ವಕೀಲರಿಂದ</u>

ನಾನು ನಮ್ಮ ವಕೀಲರಿಗೆ ದಿಃ 29-08-2021 ರಂದು ವ್ಯವಹಾರದ ಐ.ಡಿ ನಂ.4998935006 ರೂ.25,000/- ವರ್ಗಾವಣೆ ಆಗಿರುವ ಬಗ್ಗೆ ಮಾಹಿತಿಯನ್ನು ನಿಮ್ಮ ವಕೀಲರಿಗೆ ಕೊಟ್ಟಿದ್ದೀರಿ ಎಂದರೆ ಸರಿ. ಸದರಿ ಮೇಲ್ಕಂಡ ವ್ಯವಹಾರದಲ್ಲಿ ತೋರಿಸಿರುವ ಹಣವು ವರ್ಗಾವಣೆ ಆಗಿರುವುದಿಲ್ಲ ಎಂಬ ಬಗ್ಗೆ ನನಗೆ ಇತ್ತೀಚೆಗೆ ಬ್ಯಾಂಕ್

ಸ್ಟೇಟ್ಮೆಂಟನ್ನು ನೋಡಿ ತಿಳಿದುಕೊಂಡಿರುತ್ತೇನೆ ಎಂದರೆ ಸರಿ. ಸದರಿ ಮೇಲ್ಕಂಡ ವಿಚಾರವನ್ನು ಸಹ ನಮ್ಮ ವಕೀಲರಿಗೆ ನಾನು ಇತ್ತೀಚೆಗೆ ತಿಳಿಸಿದ್ದೇನೆ ಎಂದರೆ ಸರಿ. ದಿಃ 29-08-2021 ರಂದು ರೂ.25,000/- ಹಣ ವರ್ಗಾವಣೆ ಆಗದಿದ್ದ ಕಾರಣ ಮಾರನೇ ದಿನ ಫಿರ್ಯಾಧಿಗೆ ರೂ.10,000/- ಮತ್ತು ರೂ.11,000/- ಹಣವನ್ನು ಫೋನ್ ಪೇ ಮೂಲಕ ಮತ್ತು ರೂ.4,000/- ಹಣವನ್ನು ನಗದು ರೂಪದಲ್ಲಿ ಕೊಟ್ಟಿರುತ್ತೇನೆ. ಸದರಿ ವರ್ಗಾವಣೆಗೆ ಸಂಬಂಧಪಟ್ಟಂತಹ ವರ್ಗಾವಣೆ ಹಣದ ವಿವರವನ್ನು ನಿಡಿ-3 ಎಂದು ಗುರುತಿಸಲಾಯಿತು.

ಪಾಟೀ ಸವಾಲಿಗೆ ಕಾಲಾವಕಾಶಕೋರಿದ್ದು, ನೀಡಿ ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.